<u>ದಿನಾಂಕ 19 ನೇ ಸೆಪ್ಟೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ</u>

1 ನೇ ಎದುರುದಾರರು ನನ್ನ ಅತ್ತೆ, 2 ನೇ ಎದುರುದಾರರು ನನ್ನ ಗಂಡನ ಸಹೋದರಿ, 3 ನೇ ಎದುರುದಾರರು ನನ್ನ ಅತ್ತೆಯ ಸಹೋದರ. 2008 ರಲ್ಲಿ ನನ್ನ ಮದುವೆ ಆಗಿದ್ದು 2013 ರಲ್ಲಿ ನನ್ನ ಪತಿ ಮೃತರಾಗುವವರೆಗೂ ನಾನು ಹಾಗೂ 1 ನೇ ಎದುರುದಾರರು ಹಾಗೂ ನನ್ನ ಗಂಡ ಹಾಗೂ ನಾನೂ ಒಟ್ಟಿಗೆ ವಾಸವಿದ್ದೆವು. 2 ನೇ ಎದುರುದಾರರು ಬೆಂಗಳೂರಿನಲ್ಲಿ ವಾಸವಿದ್ದು ನನ್ನ ಗಂಡ ಮೃತರಾದ ನಂತರ ಇಲ್ಲಿಗೆ ಬಂದಿರುತ್ತಾರೆ. ನನ್ನ ಮಾವ ಇದ್ದಾಗ 3 ನೇ ಎದುರುದಾರರು ಮನೆಗೆ ಬರುತ್ತಿರಲಿಲ್ಲ. ನನ್ನ ಮಾವ ಮೃತರಾದ ನಂತರ ಮನೆಗೆ ಬರುತ್ತಿದ್ದರು. ಮತ್ತೂರಿನಿಂದ 3 ನೇ ಎದುರುದಾರರ ಸುಳುಗೋಡು ಗ್ರಾಮ ಸುಮಾರು 10 ಕಿ.ಮೀ ದೂರದಲ್ಲಿದೆ. ನನ್ನ ಗಂಡ ಮೃತರಾದ ದಿನದಿಂದ 2 ನೇ ಎದುರುದಾರರು ಮತ್ತೂರಿನಲ್ಲೆ ವಾಸವಿದ್ದಾರೆ. ನನ್ನ ಅತ್ತೆ ನನ್ನನ್ನು ನನ್ನ ಗಂಡ ಇರುವಾಗ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು.

ಮೊದಲು 1 ನೇ ಎದುರುದಾರರು ಬೆಂಗಳೂರಿನಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ ನನ್ನ ಮದುವೆ ಆದಾಗಿನಿಂದ ಇಲ್ಲೆ ಇದ್ದಾರೆ ಎನ್ನುತ್ತಾರೆ. ಬೆಂಗಳೂರಿನಲ್ಲಿ ನನ್ನ ಅತ್ತೆ-ಮಾವ ಆಸ್ತಿ ಮಾರಾಟ ಮಾಡಿ ಮತ್ತೂರು ಹಾಗೂ ಕೋತೂರಿನಲ್ಲಿ, ಪೊನ್ನಂಪೇಟೆ, ಬಿ ಶೆಟ್ಟಿಗೇರಿಯಲ್ಲಿ ಆಸ್ತಿ ಖರೀದಿಸಿದ್ದರು ಎಂದರೆ ಹಾಗೆ ಹೇಳುತ್ತಿದ್ದರು ಎನ್ನುತ್ತಾರೆ. ಸದರಿ ಆಸ್ತಿಗಳ ಬಗ್ಗೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿ. ನನ್ನ ಪತಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ನನ್ನ ಗಂಡ ಮೃತರಾದ ನಂತರ ನನ್ನನ್ನು ಹಾಗೂ ನನ್ನ ಹೆಣ್ಣು ಮಗುವನ್ನು ಆಗಾಗ ಬೈಯುವುದು ಹಾಗೂ ಹೆಣ್ಣು ಮಗು ಎಂದು ಬೈಯುವುದು ಮಾಡುತ್ತಿದ್ದರು. 2018 ರಲ್ಲಿ ನಾನು ಮತ್ತೂರಿನಿಂದ ನನ್ನ ತಾಯಿ ಮನೆಗೆ ಹೋಗಿರುತ್ತೇನೆ. ನನಗೆ ಅತ್ತೆ ಮನೆಯಲ್ಲಿ ಆಗುತ್ತಿದ್ದ ತೊಂದರೆಯನ್ನು ನನ್ನ ತಂದೆತಾಯಿಗೆ ಹೇಳಿದ್ದೆ ಹಾಗಾಗಿ ಅವರು ನನ್ನನ್ನು ತವರು ಮನೆಗೆ ಬರುವಂತೆ ತಿಳಿಸಿದ್ದರು. ನಾನು 2 ತಿಂಗಳು ಕೆಲಸಕ್ಕೆ ಹೋಗಿದ್ದೆ, ನನಗೆ ಅನಾರೋಗ್ಯ ಸಮಸ್ಯೆ ಹಾಗೂ ಮಗು ಚಿಕ್ಕದಾಗಿರುವ ಕಾರಣ ಕೆಲಸಕ್ಕೆ ಹೋಗಲು ಸಾಧ್ಯವಾಗಲಿಲ್ಲ ಎನ್ನುತ್ತಾರೆ. ನನ್ನ ತಂದೆ ತಾಯಿ ಸಹ ಎದುರುದಾರರ ಜೊತೆಗೆ ಸಾಕಷ್ಟು ಬಾರಿ ಮಾತನಾಡಿರುತ್ತಾರೆ. ನನ್ನ ಅತ್ತೆ ಕಡೆಯಿಂದ ಜೀವನಾಂಶ ಸರಿಯಾಗಿ ಬರಬೇಕು ಎಂದು ಹಾಗೂ ಆಸ್ತಿ ಬರಬೇಕು ಎಂದು ಕೇಳುತ್ತಿದ್ದೇನೆ.

ಒಂದುವರೆ ವರ್ಷದಿಂದ ನನ್ನ ಮಗ ನ್ಯಾಯಾಲಯದ ಆದೇಶದಂತೆ ನನ್ನ ಅತ್ತೆಯ ಜೊತೆಗೆ ಬಂದು ಈಗ ಹಾಸ್ಟೆಲ್ ನಲ್ಲಿ ಉಳಿದುಕೊಂಡು ವಿಧ್ಯಾಭ್ಯಾಸ

ಮಾಡುತ್ತಿದ್ದಾನೆ. ನನ್ನ ಮಗ ನನ್ನ ಅತ್ತೆ ಮನೆಯಲ್ಲಿ ಉಳಿದುಕೊಂಡು ಸಾಯಿಶಂಕರ್ ಶಾಲೆಯಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಕಾಪ್ಸ್ ಶಾಲೆಯಲ್ಲಿ ನನ್ನ ಮಗ ವ್ಯಾಸಾಂಗ ಮಾಡುತ್ತಿಲ್ಲ ಹಾಗೂ ಹಾಸ್ಟೆಲ್ ನಲ್ಲಿ ಇಲ್ಲ ಎಂದರೆ ಸರಿಯಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿ ನಾನು ವಾರಕ್ಕೆ 2 ದಿನ ನನ್ನ ಮಗನನ್ನು ನೋಡಬಹುದು ಎಂದು ತಿಳಿಸಿದೆ ಎಂದರೆ ಸರಿ. ನಾನು ಸದರಿ ಆದೇಶವನ್ನು ಪ್ರಶ್ನಿಸಿ ಅಪೀಲು ಹಾಕಿದ್ದೇನೆ ಎನ್ನುತ್ತಾರೆ.

ನಾನು ಕಾನೂನು ಪದವಿ ವ್ಯಾಸಾಂಗ ಮಾಡಿದ್ದೇನೆ, ಅಂತಿಮ ವರ್ಷದ ಪದವಿ ಪೂರ್ಣಗೊಳಿಸಿಲ್ಲ ಎನ್ನುತ್ತಾರೆ. ನಮ್ಮ ಆಸ್ತಿಯ ಬಗ್ಗೆ ಲಭ್ಯವಿರುವಷ್ಟು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಬೆಂಗಳೂರಿನ ಬಸವೇಶ್ವರ ನಗರದಲ್ಲಿನ ಮನೆಯನ್ನು ಮಾರಾಟ ಮಾಡಿ ನನ್ನ ಅತ್ತೆಮಾವ ಆಸ್ತಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಬಸವೇಶ್ವರ ನಗರದಲ್ಲಿನ ಮನೆ ಹಾಗೆ ಇದೆ ಎನ್ನುತ್ತಾರೆ. ಬೆಂಗಳೂರಿನಲ್ಲಿದ್ದ ಫ್ಯಾಕ್ಟರಿಯನ್ನು ಮಾರಾಟ ಮಾಡಿ ಆಸ್ತಿ ಖರೀದಿಸಿದ್ದಾರೆ ಎನ್ನುತ್ತಾರೆ. ಆಸ್ತಿಗಳ ಉಸ್ತುವಾರಿಯನ್ನು ನನ್ನ ಅತ್ತೆ ನೋಡಿಕೊಳ್ಳುತ್ತಿದ್ದಾರೆ ಎಂದರೆ 3ನೇ ಎದುರುದಾರರು ಹಾಗೂ ಮತ್ತೊಬ್ಬರು ಸುಗುಣ ಎನ್ನುವವರು ಸಹ ನೋಡಿಕೊಳ್ಳುತಿದ್ದಾರೆ ಎನ್ನುತ್ತಾರೆ. ಸದರಿ ಆಸ್ತಿಗಳಿಂದ ಎಷ್ಟು ಆದಾಯ ಬರುತ್ತದೆ, ಎಷ್ಟು ಖರ್ಚು ಬರುತ್ತದೆ ಎಂದು ನನ್ನ ಅತ್ತೆ ಕೇಳಿದರೂ ಹೇಳಿರುವುದಿಲ್ಲ ಎನ್ನುತ್ತಾರೆ.

ನನ್ನ ಗಂಡ ಮೃತರಾದ ನಂತರ ಗಲಾಟೆ ಆಗಾಗ ಆಗುತ್ತಲೇ ಇತ್ತು. ಕುಟುಂಬದ ವಿಚಾರ ಆದ ಕಾರಣ ನಾನು ಪೊಲೀಸ್ ಠಾಣೆಗೆ ತಕ್ಷಣ ದೂರು ನೀಡಲಿಲ್ಲ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.